
ಸ್ವಮೂಲದ ತಾತ್ವಿಕತೆಯ ಕಡೆಗೆ ವಾಲುತ್ತದೆ.

ರೆಸ್ಟೋರೇಟಿವ್ ಸ್ತ್ರೀವಾದ, ಸ್ತ್ರೀವಾದಿ ತಾತ್ವಿಕತೆಗಳಲ್ಲಿ ಇತ್ತೀಚೆಗೆ ಅಪಾರ ಮಹತ್ವವನ್ನು ಪಡೆಯುತ್ತಿದೆ. ಸಾಂಸ್ಕೃತಿಕ ಸ್ತ್ರೀವಾದದ ಮುಂದುವರಿಕೆಯಂತೆ ಕಾಣುವ ಈ ತಾತ್ವಿಕತೆಯು ಮಾನವ ನಾಗರಿಕತೆಯ ಆರಂಭ ಮತ್ತು ನಿರ್ಣಾಯಕ ಶಕ್ತಿಯಾಗಿ ಹೆಣ್ಣನ್ನು ನೋಡುತ್ತಾ, ನಿಧಾನವಾಗಿ ಹೆಣ್ಣಾಳ್ವಿಕೆಯು ಗಂಡಾಳಿಕೆಯಾಗಿ ಬದಲಾದದ್ದನ್ನು ಹೇಳುತ್ತಾ, ಮತ್ತೆ ನಡೆದು ಬಂದ ದಾರಿಯ ಕಡೆಗೆ ಕಣ್ಣು ಹೊರಳಿಸಬೇಕಾದ ಐತಿಹಾಸಿಕ ಗಳಿಗೆ ಬಂದಿದೆ ಎನ್ನುವುದನ್ನು ಸಮಕಾಲೀನ ಲೋಕದರ್ಶನವಾಗಿ ಪ್ರತಿಪಾದಿಸುತ್ತಿದೆ. ಈ ಮರುಗಳಿಕೆಯ ಸ್ತ್ರೀವಾದವು ರೂಪಾಂತರವಾಗಿ ಇಂದು ನಮಗೆ ಬೇಕಾಗಿದೆ. ಅಧಿಕಾರ ಕೇಂದ್ರದ ಮರು ಹುಡುಕಾಟ ಅಥವಾ ಮರು ಸ್ಥಾಪನೆ ಇಂದಿನ ಸ್ತ್ರೀವಾದದ ಆಶಯವೂ ಅಲ್ಲ, ಗುರಿಯೂ ಅಲ್ಲ. ಸಮಾನ ವೇದಿಕೆಯ ಸ್ಥಾಪನೆ ಇದರ ಮೂಲ ಗುರಿ ಎನ್ನಬಹುದು.

ಈ ಗುರಿಯನ್ನು ಶಕ್ಯವಿರುವ ಎಲ್ಲ ದಾರಿಗಳಿಂದಲೂ ತಲುಪಲು ಮಹಿಳಾ ಸಂಕಥನ ಪ್ರಯತ್ನಿಸುತ್ತಿದೆ. ಸೋಲು, ದೌರ್ಬಲ್ಯಗಳು, ಮಿತಿಗಳು, ಎಲ್ಲದರಂತೆ ಇದಕ್ಕೂ ಇವೆ ಮಾತ್ರವಲ್ಲ, ಅವು ಅನೇಕ ಸವಾಲುಗಳನ್ನೂ ಒಡ್ಡುತ್ತಿವೆ. ಆದರೆ, ಆಶ್ಚರ್ಯಕರ ಸಂಗತಿ ಎಂದರೆ, ಬಹು ಕಾಲದ ತನಕ ಸ್ತ್ರೀವಾದದ ತಾತ್ವಿಕತೆಗೂ, ಅದರ ಪ್ರಾಯೋಗಿಕ ನೆಲೆಗಳಿಗೂ ಅಪಾರ ಕಂದರವಿತ್ತು. ಸಮುದಾಯದ ಎಲ್ಲ ವರ್ಗಗಳನ್ನೂ ಒಳಗೊಳ್ಳಲು ಸಾಧ್ಯವಿರದ ಕಟು ವಾಸ್ತವ ಕಾಡುತ್ತಲೇ ಇತ್ತು. ನಿಧಾನವಾಗಿ ಪರಿಸ್ಥಿತಿ ಬದಲಾಗುತ್ತಿದೆ. 'ಸಂಘಟನೆಯೇ ಬಹು ದೊಡ್ಡ ಸವಾಲು ಹೆಣ್ಣಿನ ಮಟ್ಟಿಗೆ' ಎಂದ ಸಿಮೋನ್‌ರ ಮಾತನ್ನು ಈಗ ಹೆಣ್ಣುಮಕ್ಕಳು ಅರ್ಥ ಮಾಡಿಕೊಂಡಿರುವಂತೆ ಕಾಣಿಸುತ್ತಿದೆ. ದೇಶ ಕಾಲಾತೀತವಾಗಿ ಹೆಣ್ಣುಮಕ್ಕಳು ಜಗತ್ತಿನಾದ್ಯಂತ ಮಾನಸಿಕ ಬೆಸುಗೆಯನ್ನು ಗಳಿಸಿಕೊಳ್ಳುತ್ತಿದ್ದಾರೆ. ಅವರು ವರ್ತಮಾನವನ್ನು ಬದಲಿಸಲು ಚರಿತ್ರೆಯ ಸಹಾಯವನ್ನು ಪಡೆಯುತ್ತಿರುವುದು ವಿಲಕ್ಷಣವಾಗಿ ಕಂಡರೂ ಕುತೂಹಲಕರವಾಗಿಯೂ ಇದೆ, ಭರವಸೆಯದ್ದೂ ಆಗಿದೆ.



**ಮಣಿಬಾಲೆ**
ಲೇ: ಎಚ್.ಆರ್. ಸುಜಾತಾ
ಪು: 488; ಬೆ: ₹. 400
ಪ್ರ: ಸಂಕಥನ, 72, 6ನೇ ಕ್ರಾಸ್, ಉದಯಗಿರಿ, ಮಂಡ್ಯ–571401.

ಮಣಿಬಾಲೆ ಈ ಎಲ್ಲವನ್ನೂ ಹಲವು ಮಜಲುಗಳಲ್ಲಿ ನಿಭಾಯಿಸುತ್ತಿದೆ. ಹಳ್ಳಿಯೊಂದರ ಐವತ್ತು ವರ್ಷಗಳ ಕತೆ ಎಂದು ಸ್ವತಃ ಲೇಖಕಿಯೇ ಅದಕ್ಕೆ ಗಡಿರೇಖೆಗಳನ್ನು ಗುರುತು ಮಾಡಿದ್ದರೂ ಮಣಿಬಾಲೆ ಗಡಿರೇಖೆಗಳ ಹಂಗೇ ಇಲ್ಲದೆ ಚಲಿಸುತ್ತಾಳೆ. ಹಳ್ಳಿಯೊಂದರ ಅಂದು ಇಂದುಗಳನ್ನು ಭಿತ್ತಿಯಾಗಿಟ್ಟುಕೊಂಡು, ಅಂದಿಗೂ ಇಂದಿಗೂ ಜನಜೀವನದಂತೆಯೇ ಹೆಣ್ಣಿನ ಸ್ಥಿತಿಗತಿಗಳಲ್ಲೂ ಏನು ಬದಲಾವಣೆಯಾಗಿದೆ ಎನ್ನುವುದನ್ನು ಮಣಿಬಾಲೆ ಹಿನ್ನೋಟದಲ್ಲೂ ಸದ್ಯದ ಕನ್ನಡಿಯಲ್ಲೂ ಕಾಣುತ್ತಾಳೆ ಎನ್ನುವುದು ಕೃತಿಯ ಘೋಷಿತ ಆಶಯದಂತೆ ಕಾಣಿಸುತ್ತದೆ. ಆದರೆ ಹೆಣ್ಣಿನ ಸ್ಮೃತಿಕೋಶದಲ್ಲಿ ಏನೆಲ್ಲ ಲಂಘನಗಳು, ಉಲ್ಲಂಘನೆಗಳು ಆಗುತ್ತಲೇ ಇವೆಯಲ್ಲ ಎನ್ನುವ ಸತ್ಯವನ್ನು ಮಣಿಬಾಲೆ ಎದುರಾಗುವ ಸಂಗತಿಯು ಹೆಣ್ಣಿನ ಹೋರಾಟದ ಸಾತತ್ಯವನ್ನೂ ಪಲ್ಲಟಗಳನ್ನೂ ಏಕಕಾಲಕ್ಕೆ ಥಟ್ ಎಂದು ಹಿಡಿದುಬಿಡುವ ಹಲವು